# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560 009.

ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06

ದಿನಾಂಕ : 07 NOV 2014

ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.

ಮಾನ್ಯರೆ,

ವಿಷಯ: ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರದ ಬಗ್ಗೆ.

ಉಲ್ಲೇಖ:
1. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06, ದಿನಾಂಕ: 05.07.2007, 21.08.2007 ಮತ್ತು 29.08.2011.
2. ನಿಗಮದ ಪತ್ರ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06, ದಿನಾಂಕ: 24.09.2012.
3. ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಎಫ್ಎ(ಎ&ಆರ್)/ ಕೆಸಿಒ-01/39729/12-13, ದಿನಾಂಕ: 05.11.2012.

*****

ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06, ದಿನಾಂಕ: 29.08.2011 ರ ಅನ್ವಯ ಹೊಸದಾಗಿ ವ್ಯಾಖ್ಯಾನಿಸಿದ ಅಂಶದಾಯಿ ಕೊಡುಗೆ ಯೋಜನೆ ವ್ಯಾಪ್ತಿಗೆ ಬರುವ ನಿಗಮದ ನೌಕರರು ಸೇವೆಯಲ್ಲಿರುವಾಗಲೇ ಮೃತರಾದ ಸಂದರ್ಭದಲ್ಲಿ ಅವರ ಕುಟುಂಬದ ವಾರಸುದಾರರಿಗೆ ನೀಡಬಹುದಾದ ಇಡಿಗಂಟಿನ ಪರಿಹಾರದ ಬಗ್ಗೆ ಹೊರಡಿಸಲಾಗಿದ್ದ ಆದೇಶದಲ್ಲಿನ ಕಂಡಿಕೆ-6 ರಲ್ಲಿ ಸೂಚಿಸಲಾಗಿರುವ ನೇಮಕಾತಿ ಪ್ರಾಧಿಕಾರಿ ಮತ್ತು ಅಧಿಕರಿಸುವ ಅಧಿಕಾರ ವ್ಯಾಪ್ತಿಯ ಬಗ್ಗೆ ನಿಗಮದ, ದಿನಾಂಕ: 24.09.2012 ರ ಪತ್ರದಲ್ಲಿ ಸ್ಪಷ್ಟೀಕರಣವನ್ನು ನೀಡಲಾಗಿರುತ್ತದೆ.

ನಿಗಮದ, ದಿನಾಂಕ: 05.11.2012 ರ ಅಧಿಸೂಚನೆಯಲ್ಲಿ ಕವಿಮಂ ನೌಕರರ ಸೇವಾ ನಿಯಮಾವಳಿ 243(1), 243(2), 244(2(ಎ) ಮತ್ತು 244(2)(ಬಿ) ಗಳಿಗೆ ತಿದ್ದುಪಡಿಯನ್ನು ಮಾಡಿ ಕವಿಪ್ರನಿನಿ ಮತ್ತು ಎಸ್ಕಾಂಗಳಲ್ಲಿರುವ ಗುಂಪು 'ಸಿ' ಮತ್ತು 'ಡಿ' ಪದವೃಂದದ ನೌಕರರ ಪಿಂಚಣಿ ಸವಲತ್ತುಗಳನ್ನು ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಸಲಹೆಗಾರರು ಅಧೀಕರಿಸಲು ಅನುಮೋದನೆಯನ್ನು ನೀಡಲಾಗಿರುತ್ತದೆ.

EE(II) 12/11/14

AEE-2 10/11/2014

ಆದ್ದರಿಂದ ನಿಗಮದ, ದಿನಾಂಕ: 24.09.2012 ರ ಪತ್ರದಲ್ಲಿ ತಿಳಿಸಿರುವ ಸ್ಪಷ್ಟೀಕರಣಕ್ಕೆ ಕೆಲವೊಂದು ಮಾರ್ಪಾಡಿನ ಅಗತ್ಯವಿರುವುದರಿಂದ, ಗುಂಪು 'ಸಿ' ಮತ್ತು 'ಡಿ' ಪದವೃಂದದ ನೌಕರರಿಗೆ ಅನ್ವಯಿಸುವಂತೆ ಇಡಿಗಂಟು ಪರಿಹಾರ ನಿರ್ವಹಣೆಗೆ ಈ ಕೆಳಕಂಡ ಕ್ರಮಗಳನ್ನು ಅನುಸರಿಸಲು ಸೂಚಿಸಲಾಗಿದೆ:

| ಕ್ರ. ಸಂ. | ದಿನಾಂಕ: 24.09.2012 ರ ಪತ್ರದಲ್ಲಿ ತಿಳಿಸಲಾಗಿರುವ ಅಂಶಗಳು | ಅನುಸರಿಸಬೇಕಾದ ಕ್ರಮಗಳು |
|---|---|---|
| 1. | ಗ್ರೂಪ್ 'ಎ' ಮತ್ತು 'ಬಿ' ಶ್ರೇಣಿಯ ಅಧಿಕಾರಿಗಳಿಗೆ ಮಂಜೂರಾತಿ ಪ್ರಾಧಿಕಾರಿಯವರಾಗಿ (Sanctioning Authority) ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ) ಹಾಗೂ ಅಧೀಕರಿಸುವ ಅಧಿಕಾರ (Authorisation Authority) ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು. | <u>**ಗ್ರೂಪ್ 'ಎ' ಮತ್ತು 'ಬಿ' ಶ್ರೇಣಿಯ ಅಧಿಕಾರಿಗಳಿಗೆ:**</u><br>❖ <u>**ಮಂಜೂರಾತಿ ಪ್ರಾಧಿಕಾರಿ (Sanctioning Authority):**</u> ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು.<br>❖ <u>**ಅಧೀಕರಿಸುವ ಅಧಿಕಾರ (Authorisation Authority):**</u> ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು. |
| 2. | ಗ್ರೂಪ್ 'ಸಿ' ಮತ್ತು 'ಡಿ' ಶ್ರೇಣಿಯ ನೌಕರರಿಗೆ ಮಂಜೂರಾತಿ ಪ್ರಾಧಿಕಾರಿಯವರಾಗಿ (Sanctioning Authority) ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳು ಹಾಗೂ ಅಧೀಕರಿಸುವ ಅಧಿಕಾರ (Authorisation Authority) ಆರ್ಥಿಕ ಸಲಹೆಗಾರರು (ಲೆಕ್ಕಗಳು ಮತ್ತು ಸಂಪನ್ಮೂಲ), ಕವಿಪ್ರನಿನಿ, ಬೆಂಗಳೂರು (ಗ್ರೂಪ್ 'ಸಿ' ಮತ್ತು 'ಡಿ' ಶ್ರೇಣಿಯ ನೌಕರರ ಪಿಂಚಣಿ ಸವಲತ್ತುಗಳ ಮಂಜೂರಾತಿ ಮತ್ತು ಅಧಿಕರಿಸುವ ಕಾರ್ಯವನ್ನು ಆಯಾ ಕಂಪನಿಯ ವ್ಯಾಪ್ತಿಗೆ ಹಸ್ತಾಂತರಿಸುವವರೆವಿಗೂ). | <u>**ಗ್ರೂಪ್ 'ಸಿ' ಮತ್ತು 'ಡಿ' ಶ್ರೇಣಿಯ ನೌಕರರಿಗೆ:**</u><br>❖ <u>**ಮಂಜೂರಾತಿ ಪ್ರಾಧಿಕಾರಿ (Sanctioning Authority):**</u> ಸಂಬಂಧಪಟ್ಟ ನೇಮಕಾತಿ ಪ್ರಾಧಿಕಾರಿಗಳು.<br>❖ <u>**ಅಧೀಕರಿಸುವ ಅಧಿಕಾರ (Authorisation Authority):**</u> ಸಂಬಂಧಪಟ್ಟ ವಿದ್ಯುತ್ ಸರಬರಾಜು ಕಂಪನಿಗಳ ಆರ್ಥಿಕ ಸಲಹೆಗಾರರು. |
| 3. | ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಮೃತಪಟ್ಟ ಅಧಿಕಾರಿ/ನೌಕರರ ಕುಟುಂಬದ ವಾರಸುದಾರರಿಗೆ ಇಡಿಗಂಟಿನ ಪರಿಹಾರ ಮಂಜೂರಾತಿ ಮತ್ತು ಅಧಿಕರಿಸುವ ಮುನ್ನ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನಿಂದ ಪಿಂಚಣಿ ವಂತಿಗೆ ಸಂದಾಯದ ಬಗ್ಗೆ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿದ/ ದೃಢೀಕರಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕಿರುತ್ತದೆ. | ಮೇಲಿನ ಎಲ್ಲಾ ಸಂದರ್ಭಗಳಲ್ಲಿ ಮೃತಪಟ್ಟ ಅಧಿಕಾರಿ/ನೌಕರರ ಕುಟುಂಬದ ವಾರಸುದಾರರಿಗೆ ಇಡಿಗಂಟಿನ ಪರಿಹಾರ ಮಂಜೂರಾತಿ ಮತ್ತು ಅಧಿಕರಿಸುವ ಮುನ್ನ ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಕೆ.ಎಸ್.ಡಿ.ಸಿ.ಪಿ.ಎಸ್. ಘಟಕದಿಂದ ಪಿಂಚಣಿ ವಂತಿಗೆ ಸಂದಾಯದ ಬಗ್ಗೆ ದಾಖಲೆಗಳನ್ನು ಪರಿಶೀಲನೆಗೆ ಒಳಪಡಿಸಿದ/ದೃಢೀಕರಿಸಿದ ನಂತರವೇ ಮುಂದಿನ ಕ್ರಮ ಕೈಗೊಳ್ಳಬೇಕಿರುತ್ತದೆ. |

| ಕ್ರ. ಸಂ. | ದಿನಾಂಕ: 24.09.2012 ರ ಪತ್ರದಲ್ಲಿ ತಿಳಿಸಲಾಗಿರುವ ಅಂಶಗಳು | ಅನುಸರಿಸಬೇಕಾದ ಕ್ರಮಗಳು |
|---|---|---|
| 4. | ದಾಖಲಾತಿ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರೂಪ್ 'ಎ', 'ಬಿ', 'ಸಿ' ಮತ್ತು 'ಡಿ' ಶ್ರೇಣಿಯ ಅಧಿಕಾರಿ/ನೌಕರರ ಸೇವಾಪುಸ್ತಕವನ್ನು ಒಳಗೊಂಡಂತೆ ಸಂಬಂಧಿಸಿದ ಎಲ್ಲಾ ದಾಖಲಾತಿ ಪತ್ರಗಳನ್ನು ಹಾಲಿ ಚಾಲ್ತಿಯಲ್ಲಿರುವ ಪದ್ಧತಿಯಂತೆ ಪಿಂಚಣಿ ಶಾಖೆ, ಕವಿಪ್ರನಿನಿಯಲ್ಲಿಯೇ ಮುಂದಿನ ಆದೇಶ ನೀಡುವವರೆವಿಗೂ ನಿರ್ವಹಿಸತಕ್ಕದ್ದು. | ದಾಖಲಾತಿ ಪತ್ರಗಳ ನಿರ್ವಹಣೆಗೆ ಸಂಬಂಧಿಸಿದಂತೆ ಗ್ರೂಪ್ 'ಸಿ' ಮತ್ತು 'ಡಿ' ಪದವೃಂದದ ನೌಕರರ ಸೇವಾಪುಸ್ತಕವನ್ನು ಒಳಗೊಂಡಂತೆ ಸಂಬಂಧಿಸಿದ ಎಲ್ಲಾ ದಾಖಲಾತಿ ಪತ್ರಗಳನ್ನು ಆಯಾ ವಿದ್ಯುತ್ ಸರಬರಾಜು ಕಂಪನಿಗಳ ಪಿಂಚಣಿ ಶಾಖೆಯಲ್ಲಿ ನಿರ್ವಹಿಸತಕ್ಕದ್ದು. |

ಉಳಿದಂತೆ ನಿಗಮದ, ದಿನಾಂಕ: 29.08.2011 ರ ಆದೇಶ ಮತ್ತು ದಿನಾಂಕ: 24.09.2012 ರ ಪತ್ರದಲ್ಲಿನ ಇತರೆ ಅಂಶಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

**ತಮ್ಮ ವಿಶ್ವಾಸಿ,**

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**<u>ಗೆ,</u>**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್/ಕೆ.ಪಿ.ಸಿ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.
4. ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ)/ನಿರ್ದೇಶಕರು (ನಿಯಂತ್ರಣ ವ್ಯವಹಾರಗಳು) ಮತ್ತು ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ.
5. ಆಪ್ತ ಕಾರ್ಯದರ್ಶಿ, ಸಿಸಿಎಫ್, ಕವಿಪ್ರನಿನಿ

**<u>ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-</u>**

1. ಶ್ರೀ.ಎಂ.ನಾಗರಾಜ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ:659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
2. ಶ್ರೀ.ವಿ.ವೆಂಕಟಶಿವಾರೆಡ್ಡಿ, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು, ನಿರ್ದೇಶಕರು, ಕವಿಪ್ರನಿನಿ ಮತ್ತು ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.